



# ಭಟ್ಟರು ಉಡಿಸೋ ಸೀರೆ...

'ಮುಂಗಾರು ಮಳೆ' ಯೋಗರಾಜ ಭಟ್ಟರನ್ನು ಯಶಸ್ಸಿನ ಉತ್ತುಂಗಕ್ಕೆ ಒಯ್ದ ಸಿನಿಮಾ. ಅದೇ ಹೆಸರಿನ ಚುಂಗು ಹಿಡಿದು ನಿರ್ದೇಶಕ ಶಶಾಂಕ್ 'ಮುಂಗಾರು ಮಳೆ 2' ತೆಗೆದರೂ ಅದು ದೊಡ್ಡ ಯಶಸ್ಸಿನ ಒರತೆಯನ್ನು ಜಿನುಗಿಸಲಿಲ್ಲ. ಈಗ ಈ ಇಬ್ಬರೂ ನಿರ್ದೇಶಕರು ಒಟ್ಟಿಗೆ ಸೇರಿ ಒಂದು ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಶಶಾಂಕ್ ಮತ್ತು ಭಟ್ಟರು ಸೇರಿಕೊಂಡು ಒಂದು ಸಿನಿಮಾ ನಿರ್ಮಿಸುತ್ತಿರುವುದು ಹೊಸ ಸುದ್ದಿಯೇನಲ್ಲ. ಅದಕ್ಕೆ ರಿಷಿ ನಾಯಕ ಎಂಬ ಸಂಗತಿಯೂ ಜಾಹೀರಾಗಿತ್ತು. ಆದರೆ ಆ ಚಿತ್ರದ ಶೀರ್ಷಿಕೆ ಏನು ಎಂಬುದು ಅಂತಿಮಗೊಂಡಿರಲಿಲ್ಲ. ಈಗ ಆ ವಿಷಯವೂ ಹೊರಬಿದ್ದಿದೆ. ಈ ಸಿನಿಮಾಗೆ 'ಸೀರೆ' ಎಂದು ಹೆಸರಿಡಲಾಗಿದೆ.

ಭಟ್ಟರು ತಮ್ಮ ಸಿನಿಮಾಗಳಲ್ಲಿ ನಾಯಕಿಯರಿಗೆ ಚಡ್ಡಿ ತೊಡಿಸಿ ಪಡ್ಡೆಗಳ ಶಿಳ್ಳೆ ಗಿಟ್ಟಿಸುತ್ತಾರೆ ಎಂಬುದು ಗಾಂಧಿನಗರದ ಪೋಲಿಕಟ್ಟೆಯಲ್ಲಿ ಜನಜನಿತವಾದ ಮಾತು. ಈಗ ಈ ಸಿನಿಮಾದಲ್ಲಿ ಭಟ್ಟರು ಸೀರೆ ತೊಡಿಸಲು ಹೊರಟಿದ್ದಾರೆ. ಹಾಗಂತ ಭಟ್ಟರಿಗೆ ಸೀರೆಯೂ ಹೊಸದಲ್ಲ. ತಮ್ಮ 'ಪಂಚರಂಗಿ' ಸಿನಿಮಾದಲ್ಲಿ ದಿಗಂತ್ ಕೈಲಿ ನಿಧಿ ಸುಬ್ಬಯ್ಯಗೆ ಸೀರೆ ಉಡಿಸಿದ್ದೂ ಅಲ್ಲದೇ 'ಉಡಿಸುವೆ ಬೆಳಕಿನ ಸೀರೆಯ' ಎಂದು ಹಾಡನ್ನೂ ಹರಿಬಿಟ್ಟಿದ್ದರು. ಅದು ಸಾಕಷ್ಟು ಜನಪ್ರಿಯವೂ ಆಗಿತ್ತು. ಈಗ ಶೀರ್ಷಿಕೆಯಲ್ಲಿಯೇ ಸೀರೆ ಇಟ್ಟು ಅವರು ಮಜ ನೋಡುತ್ತಿದ್ದಾರೆ. ಅದಕ್ಕೆ ಪ್ರೇಕ್ಷಕ ಏನನ್ನುತ್ತಾನೋ ಕಾದುನೋಡಬೇಕಷ್ಟೆ. ■

# ತನಿಖೆಯ ಪ್ರಾಸ!

ರೈಮ್ಸ್. ಈ ಹೆಸರು ಕೇಳಿದ ತಕ್ಷಣ ಜನಪ್ರಿಯ ಪ್ರಾಸಪದ್ಯಗಳೆಲ್ಲ ನೆನಪಿಗೆ ಬಂದುಬಿಡುತ್ತವೆ. ಆದರೆ ನೀವಂದುಕೊಂಡಂತೆ ಇದು ಪ್ರಾಸಪದ್ಯಗಳ ಸೂಚಕವಲ್ಲ. ಸಿನಿಮಾದ ಹೆಸರು.

ನೆರೆ ಭಾಷೆಯ ನಿರ್ದೇಶಕರು, ಕನ್ನಡಕ್ಕೆ ಬಂದು ಸಿನಿಮಾ ಮಾಡಿ ಗೆಲ್ಲುವ ಪ್ರಯತ್ನ ಆಗೀಗ ನಡೆಯುತ್ತಲೇ ಇರುತ್ತದೆ. ಇದೇ ಹಂಬಲದೊಂದಿಗೆ ಚಂದನವನದಲ್ಲಿ ನಿಂತು ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿರುವ ನಿರ್ದೇಶಕ ಅಜಿತ್‌ಕುಮಾರ್ ಜೆ. ಚೆನ್ನೈ ಮೂಲದವರು. ಕ್ರೈಂ ಥ್ರಿಲ್ಲರ್ ಕಥೆಯನ್ನು ಇಟ್ಟುಕೊಂಡು ಪ್ರೇಕ್ಷಕರಿಗೆ ಎದುರಾಗುವ ಪ್ರಯತ್ನದಲ್ಲಿ ಅವರಿದ್ದಾರೆ.

ಅಜಿತ್ ಜಯರಾಜ್ ಈ ಚಿತ್ರದ ನಾಯಕ. ಅವರು ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಬೆಂಗಳೂರಿನಲ್ಲಿ ನಡೆಯುವ ಸರಣಿಕೊಲೆಗಳ ಪ್ರಕರಣವನ್ನು ಭೇದಿಸುವ ಹೊಣೆಗಾರಿಕೆ ಧಕ್ಷ ಪೊಲೀಸ್ ಅಧಿಕಾರಿಯ ಮೇಲೆ ಬೀಳುತ್ತದೆ. ಇದೇ ಪ್ರಕರಣವವನ್ನು ಭೇದಿಸಿ ವರದಿ ಮಾಡಲು ಪತ್ರಕರ್ತೆಯೊಬ್ಬಳೂ ಹೆಣಗುತ್ತಿರುತ್ತಾಳೆ. ನಿಜಕ್ಕೂ ಆ ಪ್ರಕರಣದ ಹಿಂದಿರುವ ಕೈ ಯಾರದು? ಅದನ್ನು ಯಾರು ಮೊದಲು ಶೋಧಿಸುತ್ತಾರೆ? ಆ ದಾರಿಯಲ್ಲಿ ಎದುರಾಗುವ ಸವಾಲುಗಳೇನು ಎಂಬುದೇ 'ರೈಮ್ಸ್'ನ ಹೂರಣ.

ದುಂಡುಮುಖದ ಹುಡುಗಿ ಸುಷ್ಮಾ ನಾಯರ್ ಈ ಚಿತ್ರದಲ್ಲಿ ಪತ್ರಕರ್ತೆಯಾಗಿ ಕಾಣಿಸಿಕೊಂಡಿದ್ದಾರೆ. ಅವರಿಗಿದು ಮೂರನೇ ಚಿತ್ರ. ಮಿಮಿಕ್ರಿ ಗೋಪಿ, ಅಭಿನಯ, ಚನ್ನರಾಜು, ಅಪರ್ಣಾ ಮುಖ್ಯಭೂಮಿಕೆಯಲ್ಲಿದ್ದಾರೆ. ತುಮಕೂರು ಮತ್ತು ಬೆಂಗಳೂರಿನ ಸುತ್ತಮುತ್ತಲಿನ ಜಾಗಗಳಲ್ಲಿ ಚಿತ್ರೀಕರಣ ಮಾಡಲು ತಂಡ ಯೋಜಿಸಿಕೊಂಡಿದೆ. ಹಾಡುಗಳು, ಫೈಟ್‌ಗಳಿಲ್ಲದೆಯೇ ಥ್ರಿಲ್ಲಿಂಗ್ ಅನುಭವ ನೀಡುವ ರೀತಿಯಲ್ಲಿ ಚಿತ್ರಕಥೆಯನ್ನು ನಿರ್ದೇಶಕರು ಸಿದ್ಧಪಡಿಸಿಕೊಂಡಿದ್ದಾರಂತೆ. ಜ್ಞಾನಶೇಖರ್ ಈ ಚಿತ್ರದ ನಿರ್ಮಾಪಕರು.

ಚಿತ್ರ: ಕೆ.ಎನ್. ನಾಗೇಶ್ ಕುಮಾರ್

